


ಟಿಕ್ ಟಿಕ್ ಎಂದು ಬಡಿದುಕೊಳ್ಳುತ್ತದೆ ಮತ್ತು ಜೀವಕ್ಕೆ ಪರ್ಯಾಯವಾದದ್ದೇ ಹೃದಯದ ಕ್ರಿಯಾಶೀಲತೆಯಾದ್ದರಿಂದ ಹೀಗಿರಬಹುದೆ? ಸ್ವಾರಸ್ಯವೆಂದರೆ, ಪುರಾಣದ ಪ್ರಕಾರ ಮೃತ್ಯುದೇವತೆಯಾದ ಯಮನಿಗೆ 'ಕಾಲ', 'ಸಮವರ್ತಿ' (ಎಲ್ಲರನ್ನ ಸಮನಾಗಿ ನೋಡುವವನು) ಮುಂತಾದ ಬೇರೆ ಬೇರೆ ಹೆಸರಿದೆ. 'ಕಾಲ' ಎಂದರೆ ಕಾಲಸೂಚಕ ಗಡಿಯಾರ ಹೌದಷ್ಟೆ? ಹೀಗೆ ಕಾಲಸೂಚಕ ಯಂತ್ರಕ್ಕೂ ಸಾವಿಗೂ ನಾವು ಯಾವತ್ತಿನಿಂದನೋ ನಂಟಸ್ಥಿಕೆ ಮಾಡಿಯಾಗಿದೆ.

ಹಿಂದಿನ ಕಾಲದಲ್ಲಿ ಗಡಿಯಾರಗಳನ್ನು ದಿನಕ್ಕೋ ವಾರಕ್ಕೋ ಒಮ್ಮೆ ಕಿವಿ ತಿರುವಿದರಾಗುತ್ತಿತ್ತು. ನಂತರದಲ್ಲಿ ಕೀಲಿ ಗಡಿಯಾರಗಳ ಜಾಗದಲ್ಲಿ, ಚಿಕ್ಕ ಬ್ಯಾಟರಿಶೆಲ್ ಗಡಿಯಾರ ಬಂತು; ನಂತರ